ಮಂದಮತಿಯೋ ನಾನು ಮದನಜನಕನು ನೀನು

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 85.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 425.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page no. 258.
4. **Note:** The wordings are as per the book in Ref. 1 above. The wordings in the book in Ref. 2 & Ref. 3 above and that of the singer are matching and the differences with Ref. 1 are marked in yellow highlights.

ರಾಗ: ಕಾಂಬೋಧಿ ತಾಳ: ಝಂಪೆ

ಮಂದಮತಿಯೈ (ಮಂದಮತಿಯೋ) ನಾನು ಮದನಜನಕನು ನೀನು
ಕುಂದುಗಳನೆಣಿಸದಲೆ (ಕುಂದುಗಳನೆಣಿಸದೆ) ದಯಮಾಡಿ ಸಲಹೋ ॥ ಪ ॥

ಪಾಪಕರ್ತನು ನಾನು ಪಾಪನಾಶಕ (ಪಾಪನಾಶನ) ನೀನು
ಕೋಪ ಮದ ಮತ್ಸರದಿ ಸುಳಿವೆ ನಾನು
ತಾಪವನು ತರಿದು ನಿರ್ಭಯವ ಮಾಡುವೆ ನೀನು
ರೂಪ ಛಾಯಕೆ ಮರುಳುಗೊಂಬೆಯೈ (ಮರುಳುಗೊಂಬೆನೋ) ನಾನು ॥ 1 ॥

ಶರಣ ರಕ್ಷಕ ನೀನು ಪರಮ ಪಾತಕಿ ನಾನು
ದುರಿತ ಪರ್ವತವ ಪರಿಹರಿಪೆ ನೀನು
ಮರುಳು ಗೊಂಬನು (ಗೊಂಬೆಯು) ನಾನು ಅರಿತು ರಕ್ಷಿಪೆ ನೀನು
ಗರುವ ಮತಿಯೈ (ಗರುವಾಹಂಕಾರಿ) ನಾನಗಮ್ಯ (ನಾನು ಅಗಮ್ಯ) ನೀನು ॥ 2 ॥

ಮಂದಭಾಗ್ಯನು ನಾನು ಇಂದಿರಾಪತಿ ನೀನು
ಹಿಂದು ಮುಂದಿನ ಸುದ್ದಿ ಅರಿಯವದವ ನಾನು
ತಂದೆ ಶ್ರೀ ಪುರಂದರ ವಿಠ್ಠಲ ರಾಯನೆ
ಎಂದೆಂದು ಭಕ್ತರನು ಸಲಹುವೆಯೊ ನೀನು ॥ 3 ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಕುಂದು – ಕೊರತೆ, ದೋಷ.

ರೂಪ ಛಾಯಕೆ – ನೆರಳಿಗೆ, ಹೊರ ತೋರಿಕೆ, ಹೊರ ಮಿಂಚು

ಹಿಂದು ಮುಂದಿನ ಸುದ್ದಿ – ಪೂರ್ವಜನ್ಮಗಳ ಮತ್ತು ಆಗಾಮಿ ಜನ್ಮಗಳ ವಿವರಗಳು.

ಮಂದಮತಿ = ಅಜ್ಞಾನದ ಮೂಲಕ ಕಳೆಗೆಟ್ಟ ಸ್ವರೂಪದವ

ಪರಮ ಪಾತಕಿ = ಬಹಳ ಪಾಪ ಮಾಡಿದವ

ಗರುವ ಮತಿ = ಅಹಂಕಾರಿ

Classification: Keerthane
Ankita: sri purandara vittala
Location: NA
Category: Vishnu Aradhane, Vishnu Stuti, Pooja Tatva
Sub-Category: mati, Vishnu, daya, papa, sittu, garva, Bhagya pati,
Pravachana: NA
Explanation: NA